ಅದರಲ್ಲಿ ೨ ಎಕರೆ ೨೦ ಗುಂಟೆಗೆ ಮಾತ್ರ ಗೇರು ಹಾಕಿದ್ದಾರೆ ಇನ್ನು ಉಳಿದಿದ್ದು ಹಾಗೆಯೇ ಇದೆ, ಅದನ್ನು ಮಾರಾಟ ಮಾಡಿಲ್ಲಾ. (೩) ಶ್ರೀ ರಾಮಂಭಟ್ಟ ಅವರಿಗೆ ೪ ಎಕರೆ ಕೊಟ್ಟಿದ್ದಾರೆ ಅವರಂ ಕ್ಯಾಷ್ಯೂ ಕಲ್ಟಿವೇಷನ್ ಮಾಡಿಲ್ಲಾ, (೪) ಶ್ರೀ ಗಣಪತಿ ಭಟ್ಟ ಅವರಿಗೆ ೪ ಎಕರೆ ಕೊಟ್ಟಿದೆ, ಅವರಂ ಕ್ಯಾಷ್ಯೂ ಕಲ್ಟಿವೇಷನ್ ಮಾಡಿಲ್ಲಾ. (೫) ಶ್ರೀ ಉದ್ರಿ ರಾಮಕೃಷ್ಣಪ್ಪ ಅವರಿಗೆ ೮ ಎಕರೆ ಕೊಟ್ಟಿದೆ, ಅವರು ಕ್ಯಾಷ್ಯೂ ಕಲ್ಟಿವೇಷನ್ ಮಾಡಿದ್ದಾರೆ ಅಂತ ನನಗೆ ವರದಿ ಬಂದಿದೆ.

ಶ್ರೀ ಕಾಗೋಡು ತಿಮ್ಮಪ್ಪ —ಈ ಪ್ರಶ್ನೆಯಂ ಉತ್ತರದಲ್ಲಿ ಶಿನೇಯವರು ಅಂದರೆ ಶ್ರೀ ಉದ್ರಿ ರಾಮಕೃಷ್ಣಪ್ಪ ಅನ್ನುವರು ಏನು ಇದ್ದಾರೆ ಅವರು ಹೇರಳವಾದ ಜಮೀನನ್ನು ಹೊಂದಿದ್ದಾರೆ. ಅವರು ಈ ಜಮೀನಂ ಪಡೆಯಂವ ದೃಷ್ಟಿಯಿಂದ ಇದನ್ನು ತೆಗೆದುಕೊಂಡಿದ್ದಾರೇ ಏನಾ ಇದರಲ್ಲಿ ಕ್ಯಾಷ್ಯೂ ಕಲ್ಟಿವೇಷನ್ ಮಾಡುವುದಕ್ಕೇ ಹೋಗಿಲ್ಲಾ. ಆದಂದರಿಂದ ಈ ಬಗ್ಗೆ ಈಗ ತನಿಖೆ ಮಾಡಿಸುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಗೇರು ಬೆಳೆಯಂವುದಕ್ಕಾಗಿ ಇದಕ್ಕೆ ವಿಶೇಷ ಪ್ರೋತ್ಸಾಹ ಕೊಡಂವುದಕ್ಕೋಸ್ಕರ ಇದಕ್ಕೆ ಜಮೀನು ಕೊಟ್ಟಿದ್ದಾರೇ ಏನಾ. ಅವರು ಜಮೀನ್ದಾರರಂ ಹೌದೋ ಅಲ್ಲವೇ ಅನ್ನುವುದನ್ನು ಗವಂನಕ್ಕೆ ತೆಗೆದುಕೊಳ್ಳದೆ ಅದನ್ನು ಕೊಟ್ಟಿದೆ. ಕಾನೂನಿನಲ್ಲೇ ಆ ರೀತಿ ಇರುವುದರಿಂದ ಅವರಿಗೆ ಕೊಟ್ಟಿದೆ. ಗೌರ್ನಮೆಂಟ್ ಆರ್ಡರ್ ಕೂಡ ಈ ಬಗ್ಗೆ ಸ್ಪಷ್ಟವಾಗಿ ಇರುವುದರಿಂದ ಅವರಿಗೆ ಆ ರೀತಿ ಕೊಟ್ಟಿದೆ. ಇನ್ನೇನೂ ಇದರಲ್ಲಿ ವಿಶೇಷವೇನಿಲ್ಲಾ. ಆದರಲ್ಲಿ ಇನ್ನೂ ಏನು ಇದೆ ಎಂದರೆ ಅವರು ಆದರಲ್ಲಿ ೩ ವರ್ಷ ವ್ಯವಸಾಯ ಮಾಡಬೇಕಂ ಅಂತ ಇದೆ. ಒಂದಂ ವೇಳೆ ಅವರಂ ವ್ಯವಸಾಯ ಮಾಡದೇ ಹೋದರೆ ಅದನ್ನು ವಾಪಸ್ಸು ತೆಗೆದಂಕೊಳ್ಳುತ್ತಾರೆ. ಯಾರ್ಯಾರಂ ಆ ರೀತಿ ಮಾಡಿಲ್ಲಾ ಅದನ್ನು ನೋಡಿ ಕೂಡಲೇ ಅವರ ಜಮೀನುಗಳನ್ನು ವಾಪಸ್ಸು ತೆಗೆದಂಕೊಳ್ಳಬೇಕಂ ಎಂದಂ ಸರ್ಕಾರ ಈಗಾಗಲೇ ಆಜ್ಞೆ ಮಾಡಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ, ಇಷ್ಟು ಜನಕ್ಕೆ ಈ ಜಮೀನಂಗಳನ್ನು ಕೊಡತಕ್ಕಂಥಾ ಸಂಧರ್ಭದಲ್ಲಿ ಲ್ಯಾಂಡ್ ಗ್ರಾಂಟ್ ಕಮಿಟಿಯಂ ಅಭಿಪ್ರಾಯವನ್ನು ಪಡೆದಂ ಕೊಟ್ಟಿದ್ದಾರೆಯೇ? ಅಥವಾ ಅವರೇ ಹಾಗೇ ಕೊಟ್ಟಿದ್ದಾರೆಯೇ

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ನನಗೆ ತಿಳಿದಮಟ್ಟಿಗೆ ಇದಂ ಒಂದಂ ವಿಶೇಷವಾದಂಥ ಯೋಜನೆ ಯಾದುದರಿಂದ ಇದಂ ದರಖಾಸ್ತು ಕಮಿಟಿ ಕೆಳಗೆ ಬಂದಿರಲಾರದು ಅನ್ನುವುದು ನನ್ನ ಊಹೆ. ದಯೆ ಮಾಡಿ ಈ ಸಭೆ ಕ್ಷಮಿಸಬೇಕಂ. ಇದು ಒಂದು ಸ್ಪೆಷಲ್ ಸ್ಕೀಂ ಆದುದರಿಂದ ಆ ದರಖಾಸ್ತು ಕಮಿಟಿಗೆ ಬಂದಿಲ್ಲ ಅನ್ನುವುದಂ ನನ್ನ ಊಹೆ.

ಶ್ರೀ ಕೋಣಂದೂರಂ ಲಿಂಗಪ್ಪ.—ಈ ಒಂದಂ ಸ್ಪೆಷಲ್ ಸ್ಕೀಂ ಸಾಗರದ ತಾಲ್ಲೂಕಿನಲ್ಲಿ ಮಂತ್ತು ಮಲೆನಾಡಿನ ಎಲ್ಲಾ ತಾಲೂಕಂಗಳಲ್ಲಿ ಯಾರಂ ಯಾರಂ ದೊಡ್ಡ ದೊಡ್ಡ ಭೂಮಾಲೀಕರಾಗಿರಂತ್ತಾರೋ ಅವರಿಗೆ ಮಾತ್ರ ಇದನ್ನು ವಂಜೂರಂ ಮಾಡುತ್ತೀರಾ ಹೇಗೆ?

ಅಧ್ಯಕ್ಷರಂ.— ಆ ಪ್ರಶ್ನೆ ಇದರಲ್ಲಿ ಬರಂವುದಿಲ್ಲ.

ಶ್ರೀ ಎಂ. ಹೆಚ್. ಜಯಪ್ರಕಾಶ್ ನಾರಾಯಣ್.—ಗೇರು ಬೆಳೆಯಂವುದಕ್ಕಾಗಿ ಅದರ ಅಭಿವೃದ್ಧಿ ಗಾಗಿ ಈ ಒಂದಂ ಸ್ಕೀಂಗೆ ಉತ್ತೇಜನ ಕೊಟ್ಟಿದ್ದೇವೆ ಎಂದಂ ಹೇಳುತ್ತಾರೆ. ಇದರಲ್ಲಿ ಬಡವರೂ ಕೂಡ ಅರ್ಜಿ ಹಾಕಿಕೊಂಡಿದ್ದಾರೆ. ಅವರಿಗೆ ಜಮೀನಂ ಕೊಟ್ಟಿಲ್ಲ. ಯಾರು ಪಟ್ಟಭದ್ರಹಿತಾಸಕ್ತಿಗಳಂ ಆಗಿದ್ದಾರೋ ಅಂಥಾವರಿಗೆ ಈ ಜಮೀನನ್ನು ಕೊಟ್ಟಿದ್ದೀರಿ. ಆದುದರಿಂದ ಇದನ್ನು ಪುನರ್ ಪರಿತೀಲನೆ ಮಾಡಿ ಯಾರಂ ಯಾರಂ ಈ ಬಗ್ಗೆ ಅರ್ಜಿ ಹಾಕಿಕೊಂಡಿರಂತ್ತಾರೋ ಅವರಿಗೆ ೨ ಕೊಡುವುದಕ್ಕೆ ಒಂದಂ ವ್ಯವಸ್ಥೆ ಮಾಡುತ್ತಿರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರಂ ಊಹೆ ಮಾಡಿ ಹೇಳುತ್ತಾರೆ. ಯಾರ್ಯಾರಂ ಈ ಜಮೀನಿನ ಬಗ್ಗೆ ಅರ್ಜಿ ಕೊಟ್ಟಿದ್ದಾರೆ, ಆದರಲ್ಲಿ ಯಾರ್ಯಾರಿಗೆ ಕೊಟ್ಟಿಲ್ಲಾ ಅನ್ನುವ ವಿವರಗಳನ್ನೆಲ್ಲಾ ಅಧಿಕಾರಿಗಳಿಂದ ತರಿಸಿ ಆದರಲ್ಲಿ ಅನ್ಯಾಯವಾಗಿದ್ದರೆ, ಉದ್ದೇಪೂರ್ವಕವಾಗಿ ಏನಾದರೂ ಅನ್ಯಾಯ ಮಾಡಿದರೆ ಅಂಥಾವರ ಮೇಲೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ ಎಂದಂ ಹೇಳುತ್ತೇನೆ.

1-30 P.M.

Hardship caused due to Fire Accidents

428. SRI K. H. HANUME GOWDA (Hassan).—Will the Minister for Revenue be pleased to state :—

(*a*) the names of villages in Kattaya, Kasaba and Shantigrama Hoblies of Hassan Block where people were put to hardship due to fire accidents ;

(*b*) the addresses of the persons who have sustained loss ;

(*c*) the names of persons and the quantum of loss sustained due to each of the fire accidents ;

(*d*) the dates on which the fire accidents took place ;

(*e*) the dates and quantum of compensation granted by the Government in each of the fire accidents ?

Sri N. HUTCHAMASTHY GOWDA (Minister for Revenue).—(*a*), (*b*), (*c*), (*d*) and (*e*) Statement is placed on the Table of the House.*

ಶ್ರೀ ಕೆ. ಹೆಚ್. ಹನುಮೇಗೌಡ.—ಸ್ವಾಮಿ, ಬೆಂಕಿ ಅಕಸ್ಮಿಕದಿಂದ ಉಂಟಾದ ತೊಂದರೆಗಳಿಗೆ ಯಾರು ನೊಂದಿರುತ್ತಾರೋ ಅಂಥವರಿಗೆ ಪರಿಹಾರವನ್ನು ಸುಮಾರು ೪-೫ ಜನಗಳಿಗೆ ಒಂದು ವರ್ಷದ ಮೇಲೆ ಕೊಟ್ಟಿದ್ದೀರಿ ಈ ಬಗ್ಗೆ ಒಂದು ಉದಾಹರಣೆ ಹೇಳುವುದಾದರೆ ಜನಾರ್ಧನ, ಅಗ್ರಹಾರ ಬೀದಿ, ಹಾಸನ ಇಲ್ಲಿ ಫೈರ್ ಆಕ್ಸಿಡೆಂಟ ಆದದ್ದು ೨೬-೩-೧೯೭೬ ರಲ್ಲಿ, ಇವರಿಗೆ ಲಂಕ್ಷನು ಆಗಿರುವುದು ೩೫೦ ರೂಪಾಯಿ. ಇವರಿಗೆ ಪೇಮೆಂಟ್ ಆಗಿರುವುದು ೨೫೦ ರೂಪಾಯಿ, ತಾರೀಖು ೦೬-೩-೧೯೭೭ ರಲ್ಲಿ. ಸುಮಾರು ಒಂದು ವರ್ಷದ ಮೇಲೆ ಇವರಿಗೆ ಪೇಮೆಂಟ್ ಆಗಿದೆ. ಇದೇ ರೀತಿ ಇನ್ನೂ ೨-೩ ಸಂದರ್ಭದಲ್ಲಿ ಕೂಡ ಆಗಿದೆ. ಆದುದರಿಂದ ನಾನು ಕೇಳುವುದು ಏನೆಂದರೆ ಇದರ ಬಗ್ಗೆ ಸರ್ಕಾರ ಪರಿಹಾರ ಕೊಡುವ ಉದ್ದೇಶ ಏನು ? ಯಾರಾದರೂ ಬೆಂಕಿ ಅಕಸ್ಮಿಕದಿಂದ ನೊಂದಿದ್ದರೆ ಅಂಥವರಿಗೆ ಬೇಗನೆ ಪರಿಹಾರ ಸಿಗಬೇಕೇ ಏನಾ ಒಂದು ವರ್ಷದ ಮೇಲೆ, ಎರಡು ವರ್ಷದ ಮೇಲೆ, ಮಂಸಿಸ್ಸಿಗೆ ಬಂದಾಗ ಪರಿಹಾರ ಅವರಿಗೆ ಕೊಡುವುದಾದರೆ ಇದರ ಅರ್ಥ ಏನು ? ಈ ರೀತಿ ವಿಳಂಬ ಆಗುವುದಕ್ಕೆ ಕಾರಣಗಳೇನು ಅನ್ನುವುದನ್ನು ಮಾನ್ಯ ಮಂತ್ರಿಗಳು ದಯವಾಡಿ ತಿಳಿಸುತ್ತೀರಾ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸಾಮಾನ್ಯವಾಗಿ ಈ ಬಗ್ಗೆ ಇರತಕ್ಕಂಥ ನಿಯಮವೇನೆಂದರೆ ಬೆಂಕಿ ಬಿದ್ದ ದಿವಸ ಅಥವಾ ಮಾರನೇ ದಿವಸ ಇಲ್ಲವೇ ೩ ದಿವಸಗಳೊಳಗೆ ಸಂಬಂಧಪಟ್ಟ ಅಧಿಕಾರಿಗಳು ಅಲ್ಲಿಗೆ ಹೋಗಿ ನೋಡಬೇಕು ಎಂದು. ಮತ್ತು ನೊಂದವರಿಗೆ ಪರಿಹಾರವನ್ನು ತಾಲ್ಲೂಕ್ ಮಟ್ಟದ ಅಧಿಕಾರಿಗಳು ತಕ್ಷಣವೇ ಕೊಡಬೇಕೆಂದು ನಷ ಇನ್ನೂ ಹೆಚ್ಚಾಗಿದ್ದರೆ ಅವರಿಗಿಂತ ಮೇಲ್ಪಟ ಅಧಿಕಾರಿಗಳು ಕೊಡಬೇಕೆಂದು ನಿಯಮವಿದೆ. ಇಲ್ಲಿ ಪರಿಹಾರ ಕೊಡುವ ಬಗ್ಗೆ ಇಷ್ಟೊಂದು ನಿಧಾನವಾಗಲು ಕಾರಣವೇನು ಎಂಬುದಾಗಿ ವಿವರಣೆ ಕೇಳಿದ್ದೇನೆ. ಹಣ ಇಲಿಲ್ಲವೇ ಅಥವಾ ಅಧಿಕಾರಿಗಳಿಂದ ಏನಾದರೂ ಲೋಪವಾಗಿದೆಯೇ ಎಂಬುದಾಗಿ ವಿವರಣೆ ಕೇಳಿದ್ದೇನೆ. ಆ ವಿವರಣೆ ನನಗೆ ಬಾದ ಕೂಡಲೇ ನಾನು ಅದನ್ನು ತಮಗೆ ತಿಳಿಸುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಇಲ್ಲಿ ಕೆಲವರಿಗೆ ಎಷ್ಟು ನಷ್ಟವಾಗಿದೆಯೋ ಅಷ್ಟೇ ಪರಿಹಾರ ಧನವನ್ನು ಕೊಟ್ಟಿದ್ದೀರಿ, ಆದರೆ ಮತ್ತೆ ಕೆಲವರಿಗೆ ೨ ಸಾವಿರ ೩ ಸಾವಿರ ರೂಪಾಯಿಗಳವರೆಗೆ ನಷ್ಟವಾಗಿದ್ದರೂ ಸಹ ಕೇವಲ ೩೦೦ ರೂಪಾಯಿಗಳನ್ನು ಕೊಟ್ಟಿರುವುದಕ್ಕೆ ಕಾರಣವೇನು ? ಇದಕ್ಕೆ ಏನು

*Copies placed in the Karnataka Legislature Library *Vide* Nos. 34 29th June 1977.*

ಆಧಾರವಿದೆ ? ಉದಾಹರಣೆಗೆ ಇಲ್ಲಿ ಲಕ್ಕೇಗೌಡ ಬಿನ್ ಚಲುವೇಗೌಡ, ಉದ್ಯೂರು, ಇವರಿಗೆ ೨೫೦೦ ರೂಪಾಯಿಗಳು ನಷ್ಟವಾಗಿದ್ದರೂ ಸಹ ೩೦೦ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದೀರಿ ಮತ್ತು ಉಯ್ಯಲೆ ಗೌಡ ಬಿನ್ ಬೋರೇಗೌಡ, ಉದ್ಯೂರು, ಇವರಿಗೆ ೨ ಸಾವಿರ ರೂಪಾಯಿಗಳು ನಷ್ಟವಾಗಿದ್ದರೂ ಸಹ ೩೦೦ ರೂಪಾಯಿಗಳನ್ನು ಕೊಡಲಾಗಿದೆ. ಈ ಒಂದು ತಾರತಮ್ಯ ಏತಕ್ಕೆ ಮಾಡಿರುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ಥಳದಲ್ಲಿಯೇ ಎಷ್ಟು ಪರಿಹಾರ ಕೊಡಬಹುದೆಂಬುದಕ್ಕೆ ಸರ್ಕಾರದ ಆಜ್ಞೆ ಇದೆ. ನಷ್ಟ ಹೆಚ್ಚಾಗಿದ್ದರೆ ಪರಿಹಾರವನ್ನು ಮೇಲ್ಪಟ್ಟ ಅಧಿಕಾರಿಗಳು ಕೊಡಬೇಕಾಗುತ್ತದೆ. ಇಂತಹ ಪ್ರಸಂಗಗಳಲ್ಲಿ ನಷ್ಟ ಎಷ್ಟಾಗಿದೆ ಎಂಬುದನ್ನು ತಿಳಿದು ಕೊಡಬೇಕಾಗುವುದರಿಂದ ನಿಧಾನವಾಗಿದೆಯೇ ಹೊರತು ಇದರಲ್ಲಿ ತಾರತಮ್ಯವೇನೂ ಇಲ್ಲ.

ಶ್ರೀ ಕೆ. ಎಚ್. ಹನುಮೇಗೌಡ.—ತಹಶೀಲ್ದಾರರು ೫೦ ರೂಪಾಯಿಗಳವರೆಗೆ ಪರಿಹಾರ ಕೊಡುತ್ತಾರೆ. ಡಿ.ಸಿ ಅವರು ೩೦೦ ರೂಪಾಯಿಗಳವರೆಗೆ ಪರಿಹಾರ ಕೊಡುತ್ತಾರೆ. ಅದಕ್ಕೂ ಜಾಸ್ತಿ ಪರಿಹಾರ ಕೊಡಬೇಕಾದರೆ ಸಂಬಂಧಪಟ್ಟ ರೆಕಾರ್ಡ್‌ಗಳನ್ನು ಸ್ಥಳೀಯ ಅಧಿಕಾರಿಗಳು ಡಿವಿಜನಲ್ ಕಮೀಷನರ್ ಇಲ್ಲವೇ ರೆವಿನ್ಯೂ ಕಮೀಷನರ್ ಅವರಿಗೆ ಕಳುಹಿಸಿಕೊಡುತ್ತಾರೆ. ಆದರೆ ಇಲ್ಲಿ ಕೆಲವು ಪ್ರಸಂಗಗಳಲ್ಲಿ ೨ ಸಾವಿರ ೩ ಸಾವಿರ ರೂಪಾಯಿ ಲುಕ್ಸಾನಾಗಿದ್ದರೂ ಸಹ ಕೇವಲ ೨೦೦, ೩೦೦ ರೂಪಾಯಿಗಳನ್ನು ಮಾತ್ರ ಕೊಟ್ಟಿರುವುದಕ್ಕೆ ಕಾರಣವೇನು ? ಇಷ್ಟು ಕಡಿಮೆ ಹಣ ಕೊಟ್ಟರೆ ಅವರನ್ನು ಯಾವ ರೀತಿ ಉದ್ಧಾರ ಮಾಡಿದಂತೆ ಆಗುತ್ತದೆ ಮತ್ತು ಅವರಿಗೆ ಏನು ಪರಿಹಾರ ಕೊಟ್ಟಂತಾಗುತ್ತದೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇಲ್ಲಿ ಉದ್ಧಾರ ಮಾಡುವ ಪ್ರಶ್ನೆ ಇಲ್ಲ. ಎಷ್ಟೆಷ್ಟು ಪರಿಹಾರ ಕೊಡಬೇಕೆಂಬ ಬಗ್ಗೆ ನಿಯಮವಿದೆ. ಅದರ ಪ್ರಕಾರ ಹೆಚ್ಚಿನ ಪರಮಾನ ಬರತಕ್ಕವರಿಗೆ ಈ ರೀತಿ ಏನಾದರೂ ನಷ್ಟವಾಗಿದ್ದರೆ, ಅಂತಹವರಿಗೆ ಪರಿಹಾರ ಕೊಡುವ ನಿಯಮವಿಲ್ಲ. ಮತ್ತು ನಷ್ಟವನ್ನು ಪೂರ್ತಿ ಭರ್ತಿ ಮಾಡಿಕೊಡುವುದಕ್ಕೂ ಸಹ ಸರ್ಕಾರದ ಆಜ್ಞೆಯಲ್ಲಿ ಅವಕಾಶವಿಲ್ಲ. ಇಷ್ಟು ನಷ್ಟವಾಗಿದ್ದರೆ ಇಷ್ಟು ಪರಿಹಾರ ಕೊಡಬಹುದೆಂದು ನಿಯಮವಿದೆ. ಅದರಂತೆ ಇಲ್ಲಿ ಕೊಟ್ಟಿದ್ದಾರೆ. ಅದನ್ನು ಮೀರಿ ಕೊಡುವುದಕ್ಕೆ ಸಾಧ್ಯವಿಲ್ಲ. ಮತ್ತು ಈ ರೀತಿ ಯಾರಿಗಾದರು ನಷ್ಟವಾದಾಗ, ಸಂಬಂಧಪಟ್ಟ ಅಧಿಕಾರಿಗಳ ಹತ್ತಿರ ಈ ಬಾಬಿಗೆ ಕೊಡಲು ಹಣವಿಲ್ಲದಿದ್ದರೆ ಸರ್ಕಾರದಿಂದ ಮಂಜೂರು ಮಾಡಿಸಿ ಕೊಂಡು ಕೊಡಬೇಕಾಗುತ್ತದೆ.

ಶ್ರೀ ಕೆ. ಎಚ್. ಹನುಮೇಗೌಡ.—ತೀರ ಬಡವರಿಗೆ ಹೆಚ್ಚಿನ ಲುಕ್ಸಾನಾಗಿದ್ದರೆ ಡಿವಿಜನಲ್ ಕಮೀಷನರ್‌ಗೆ, ರೆವಿನ್ಯೂ ಕಮೀಷನರ್‌ಗೆ, ಮತ್ತು ಸರ್ಕಾರಕ್ಕೆ ಎಷ್ಟೆಷ್ಟು ಪರಿಹಾರ ಕೊಡಲು ಅಧಿಕಾರ ವಿದೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಬಗ್ಗೆ ಸರ್ಕಾರದ ಆಜ್ಞೆ ಇದೆ. ಅದನ್ನು ತಾವು ನೋಡಿದರೆ ತಿಳಿಯುತ್ತದೆ. ಆದರಲ್ಲಿ ಯಾವ ಯಾವ ಸಂದರ್ಭದಲ್ಲಿ ಯಾರು ಯಾರಿಗೆ ಎಷ್ಟೆಷ್ಟು ಪರಿಹಾರ ಕೊಡುವುದಕ್ಕೆ ಅಧಿಕಾರವಿದೆ ಎಂಬುದನ್ನು ಹೇಳಲಾಗಿದೆ.

Question No. 456

re : benefit of past Service to Ex. HECP employees by M.P.C.

SRI KAGODU THIMMAPPA.—In view of the discussion I had with the Minister concerned, I do not wish to put Question No 456.